ಬಿಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಒಂದು ಕಾರಣದಿಂದ ವಿದ್ಯಾರ್ಥಿಗಳ ಜೀವನ ಹಾಳಾಗಬಾರದೆಂಬ ದೃಷ್ಟಿಯಿಂದ ಈ ಸಾರಿ ಅವರೆಲ್ಲರಿಗೂ ಅನುಮತಿ ಕೊಡಿ ಎಂದು ಮತ್ತೆ ಅಟೆಂಡೆನ್ಸ್ ಶಾರ್ಟೆಜ್ ಇದ್ದರೆ ಮತ್ತೊಂದು ಸಲ ತುಂಬಿಕೊಳ್ಳುವಂಥ ನಿಯಮವನ್ನು ಮಾಡಿ ಎಂಬ ಬಗ್ಗೆ ನಾಳೆ ದಿವಸ ವಿಶ್ವವಿದ್ಯಾಲಯಕ್ಕೆ ಡೈರೆಕ್ಷನ್ ಕೊಡುತ್ತೇನೆ.

ಆ) ವಿಷಯ :– ಉಡುಪಿಯ ಬಜೆ ಅಣೆಕಟ್ಟಿನಿಂದ ರೈತರಿಗೆ ನೀರನ್ನು ಕೊಡುವ ಬಗ್ಗೆ:

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :– ಮಾನ್ಯ ಛೇರ್ಮನ್‌ರವರೆ, ಮೊನ್ನೆ ದಿವಸ ಒಂದು ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಮಾನ್ಯ ಮುನಿಸಿಪಲ್ ಅಡ್ಮಿನಿಸ್ಟ್ರೇಶನ್ ಮಿನಿಸ್ಟ್ರರವರ ಹತ್ತಿರ ಉತ್ತರವನ್ನು ಕೊಡಿಸುತ್ತೇನೆಂದು ಆ ಸಂದರ್ಭದಲ್ಲಿ ಮಾನ್ಯ ಸಂಸದೀಯ ಸಚಿವರು ಹೇಳಿದ್ದರು. ಆದರೆ, ಅವರು ನಮಗೆ ಇದುವರೆಗೂ ಸಿಕ್ಕಿಲ್ಲ. ಆದ್ದರಿಂದ ಡಾ॥ ವಿ.ಎಸ್. ಆಚಾರ್ಯರವರು ಇಲ್ಲಿಯೇ ಇದ್ದಾರೆ. ಕೊನೇ ಪಕ್ಷ ಅವರಾದರೂ ಉತ್ತರ ಕೊಡಲಿ. ಏಕೆಂದರೆ, ಅವರು ಆ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಾರೆ. ನಮ್ಮ ಬಜೆ ಅಣೆಕಟ್ಟಿನಿಂದ ಅಲ್ಲಿರತಕ್ಕಂಥ ರೈತರಿಗೆ ನೀರನ್ನು ಕೊಡುವ ಬಗ್ಗೆ ಹೇಳುತ್ತಿದ್ದೇನೆ. ಆದರೆ, ಉಡುಪಿ ಮುನಿಸಿಪಾಲಿಟಿಯವರು ಇದರ ಕಟ್‌ಔಟ್ ಅನ್ನು ತೆಗೆದಿದ್ದಾರೆ. ಕಟ್‌ಔಟ್ ತೆಗೆದು 10 ದಿವಸಕ್ಕೊಂದು ಸಾರಿ ನೀರು ಕೊಡುವ ಬಗ್ಗೆ ತೀರ್ಮಾನ ಮಾಡಿದ್ದಾರೆ. ನಾನು ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಕ್ಕೆ ನಿನ್ನೆ ದಿವಸ ಅವರಿಗೆ ಕಟ್‌ಔಟ್ ಅನ್ನು ಸಹ ಕೊಟ್ಟಿಲ್ಲ. 10 ದಿವಸಕ್ಕೊಂದು ಸಾರಿ ನೀರು ಕೊಟ್ಟರೆ ರೈತರಿಗೆ ಸಾಕಾಗುವುದಿಲ್ಲ. ವಾರಕ್ಕೆ ಕೋನೇ ಪಕ್ಷ 3 ದಿವಸ ಅಥವಾ 2 ದಿವಸ ಕೊಡುವ ವ್ಯವಸ್ಥೆಯನ್ನು ತಾವು ಮಾಡಬೇಕಾಗುತ್ತದೆ. ಅಲ್ಲಿನ ರೈತರ ತೋಟ ಮತ್ತು ಬೆಳೆ ನಾಶವಾಗುವ ಪರಿಸ್ಥಿತಿಗೆ ತೆಗೆದುಕೊಂಡು ಹೋಗಬೇಡಿ. ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ಹೇಳಬೇಕು.

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :– ಮಾನ್ಯ ಛೇರ್ಮನ್‌ರವರೆ, ಈ ಡ್ಯಾಂ ಅನ್ನು ಉಡುಪಿ ನಗರಕ್ಕೆ ನೀರು ಒದಗಿಸುವುದಕ್ಕೋಸ್ಕರ ಕಟ್ಟಿರತಕ್ಕಂಥದು. ಇದು ತಮಗೂ ಸಹ ಗೊತ್ತಿದೆ. 1972 ರಲ್ಲಿ ಒಂದು ಡ್ಯಾಂ ಅನ್ನು ಕಟ್ಟಲಾಯಿತು ಮತ್ತೆ ಇತ್ತೀಚೆಗೆ ಎರಡನೇ ಡ್ಯಾಂ ಅನ್ನು ಕಟ್ಟಲಾಗಿದೆ. ಅಲ್ಲಿ ನಗರ ಬೆಳೆದಿದೆ ಮತ್ತು ಜನಸಂಖ್ಯೆ ಕೂಡ ಜಾಸ್ತಿಯಾಗಿದೆ. ಹಾಗೆಯೇ, ಮಲ್ಪೆ ಮತ್ತು ಮಣಿಪಾಲ ಜಾಗ ಕೂಡ ಇದಕ್ಕೆ ಸೇರಿದೆ. ತಮಗೆ ಗೊತ್ತಿರುವ ಹಾಗೆ ಕುಡಿಯುವ ನೀರಿಗೆ ಪ್ರಥಮ ಆದ್ಯತೆ ಇದೆ. ಎರಡನೆಯದು ಕೃಷಿಗೆ ಮತ್ತು ಮೂರನೆಯದು ಐಡಲ್‌ಗೆ ನಾಲ್ಕನೆಯದು

ಕೈಗಾರಿಕೆಗೆ ಮತ್ತು ಐದನೆಯ ಆದ್ಯತೆ ಕನ್ಸ್ಟ್ರಕ್ಷನ್ ಆಕ್ಟಿವಿಟಿಸ್‌ಗೆ ಇದೆ. ಆದ್ದರಿಂದ ಕುಡಿಯುವ ನೀರಿಗೆ ಪ್ರಥಮ ಆದ್ಯತೆ ಕೊಡಬೇಕಾಗಿದೆ. ಅಲ್ಲಿನ ಸ್ವರ್ಣಾ ನದಿಯಲ್ಲಿ ನೀರು ಹರಿದು ಹೋಗುವ ದಿವಸದವರೆಗೂ ನಾವು ಯಾರಿಗೂ ಆತಂಕ ಮಾಡಲಿಲ್ಲ. ಅಲ್ಲಿ ನದಿಗೆ ಸುಮಾರು 65 ಪಂಪ್‌ಗಳನ್ನು ಫಿಟ್ ಮಾಡಿದ್ದಾರೆ. ನದಿಯಲ್ಲಿ ನೀರು ಹರಿದು ಹೋಗುವಂಥ ಸಮಯದಲ್ಲಿ ಇವರ್ಯಾರಿಗೂ ನಾವು ಆಕ್ಷೇಪಣೆ ಮಾಡಲಿಲ್ಲ. ಮತ್ತೆ ಮಾರ್ಚ್ ತಿಂಗಳ ಅಂತ್ಯದವರೆಗೂ ಕೂಡ ಅವರಿಗೆ ನೀರು ಬಿಟ್ಟಿದ್ದೇವೆ. ಆದರೆ, ಈಗ ಅಲ್ಲಿರುವ ನೀರು ಸುಮಾರು 40–50 ದಿವಸದವರೆಗೂ ಸಾಕಾಗುವುದಿಲ್ಲ. ಉಡುಪಿ ನಗರ ಜನರಿಗೆ ಕುಡಿಯುವ ನೀರನ್ನು ಒದಗಿಸುವ ಉದ್ದೇಶದಿಂದ ಕಟ್ಟಿದಂಥ ಡ್ಯಾಂ. ಅದು ನಗರಸಭೆಯ ಪ್ರಾಪರ್ಟಿ ಮತ್ತೆ ಇದನ್ನು ನಗರ ಸಭೆಯವರು ಕಟ್ಟಿರತಕ್ಕಂತದೂ ಕೂಡ ಆಗಿದೆ. ನಾವೇನು ಅಲ್ಲಿ ರೈತರಿಗೆ ತೊಂದರೆ ಮಾಡುವುದಕ್ಕೆ ಹೋಗಿಲ್ಲ. ಅಲ್ಲಿ ಕುಡಿಯುವ ನೀರು ಸುಮಾರು 40–50 ದಿವಸ ಕೂಡ ಬರುವುದಿಲ್ಲ. ಮತ್ತೆ ಇನ್ನು 60–70 ದಿವಸಗಳವರೆಗೆ ಮಳೆ ಬರುವುದಿಲ್ಲವೆಂಬ ಮಾಹಿತಿ ಕೂಡ ಇದೆ. ಆದರೂ ಕೂಡ 8–10 ದಿವಸಕ್ಕೊಮ್ಮೆ ನೀರು ಕೊಡಬೇಕೆಂದು ತೀರ್ಮಾನ ಮಾಡಿತ್ತು. ಆದರೆ ಇತ್ತೀಚೆಗೆ ನೀರು ಬೇಗ ಬೇಗ ಕಡಿಮೆಯಾಗುತ್ತಿದೆ. ಮೊದಲು ಒಂದು ದಿವಸಕ್ಕೆ 2 cm ನಷ್ಟು ಕಡಿಮೆಯಾಗುತ್ತಿತ್ತು. ಆದರೆ, ಈಗ 3–4cm ಕಡಿಮೆಯಾಗುತ್ತಿರುವುದರಿಂದ ಅಪಾಯದ ಮಟ್ಟ ಮುಟ್ಟುತ್ತಿರುವುದರಿಂದ ನಾವು ಅನಿವಾರ್ಯವಾಗಿ ಈ ರೀತಿಯಾಗಿ ಮಾಡಬೇಕಾಗಿದೆ. ಕೋಟಿಗಟ್ಟಲೆ ಹಣ ಖರ್ಚು ಮಾಡಿ ಆ ನದಿಗೆ ಡ್ಯಾಂ ಕಟ್ಟಿ ಅಲ್ಲಿ ನೀರನ್ನು ಸ್ಟೋರ್ ಮಾಡಿರತಕ್ಕಂಥದು ನಮ್ಮ ನಗರದ ಜನತೆಗೋಸ್ಕರ. ಆದ್ದರಿಂದ ತಾವೂ ಕೂಡ ಸಹಕರಿಸಬೇಕು. ಅಲ್ಲಿನ ರೈತರ ಹತ್ತಿರ ನಾವು ಮಾತನಾಡಿದ್ದೇವೆ. ರೈತರಿಗೆ ತೊಂದರೆಯಾಗುವ ಪರಿಸ್ಥಿತಿ ಬಂದಾಗ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ರೈತರು ಅಲ್ಲಿ ಮೊದಲಿನಿಂದಲೂ ನೀರನ್ನು ತೆಗೆದುಕೊಳ್ಳುತ್ತಿದ್ದರು. ಈಗ ಅಲ್ಲಿ ಅಣೆಕಟ್ಟನ್ನು ಕಟ್ಟಲಾಗಿದೆ. ಈಗ ಪ್ರತಿದಿವಸ ನೀರು ಕಡಿಮೆಯಾಗುತ್ತಿದೆಂದು ತಾವು ಹೇಳುತ್ತಿದ್ದೀರಿ. ಆದರೆ, ರೈತರ ತೋಟ ಏನಾಗುತ್ತದೆ ಎಂಬುದರ ಬಗ್ಗೆ ತಾವು ಯೋಚನೆ ಮಾಡಿ? ರೈತರು ಮೊದಲೇ ಅಲ್ಲಿ ತೋಟವನ್ನು ಮಾಡಿಕೊಂಡಿದ್ದರು. ಆದ್ದರಿಂದ ಅದನ್ನು ನೀವು ಒಣಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಉಡುಪಿ ಮುನಿಸಿಪಾಲಿಟಿಗೆ ನೀರು ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಅಲ್ಲಿಗೆ ಬೇರೆ ಕಡೆಯಿಂದ ತರಬಹುದಾಗಿದೆ. ನಿಮ್ಮ ಸ್ವರ್ಣಾ 2ನೇ ಹಂತದ ಡ್ಯಾಂ ಫೇಲ್ಯೂರ್ ಆಯಿತು. ಅಲ್ಲಿ ವಾರಕ್ಕೆ ಎರಡು ದಿವಸವಾದರು ನೀರು ಕೊಡಿ.

ಛೇರ್ಮನ್ :– ಮಾನ್ಯ ಸದಸ್ಯರೆ, ಶೂನ್ಯವೇಳೆಯಲ್ಲಿ ಫರ್ದರ್ ಕ್ಲಾರಿಫಿಕೇಶನ್ ಕೇಳುವ ಹಾಗಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಕ್ಲಾರಿಫಿಕೇಶನ್ ಅಲ್ಲದಿದ್ದರೂ ಅದಕ್ಕೆ ಅವರು ಉತ್ತರವಾದರೂ ಹೇಳಬೇಕಲ್ಲವೆ?

ಡಾ॥ ವಿ.ಎಸ್. ಆಚಾರ್ಯ :– ನಾನು ಈಗಾಗಲೇ ಹೇಳಿದ ಹಾಗೆ ನದಿಯಲ್ಲಿ ನೀರು ಹರಿದು ನಮ್ಮ ಡ್ಯಾಂನಿಂದ overflow ಆಗುವವರೆಗೂ ನಾವೂ ಯಾರ ತಂಟೆಗೂ ಹೋಗಿಲ್ಲ. ಅನಂತರ ಸಹ ಮಾರ್ಚ್ ತಿಂಗಳ ಅಂತ್ಯದವರೆಗೂ ಸಹ ನಾವು ನೀರು ಕೊಟ್ಟಿದ್ದೇವೆ. ಆದರೆ, ಈಗ ನೀರು ಅಪಾಯ ಮಟ್ಟಕ್ಕಿಂತ ಕೆಳಗೆ ಇಳಿಯುತ್ತಿದೆ. ನಗರದ ಜನತೆಗೆ ಕುಡಿಯುವ ನೀರನ್ನು ಸ್ವಲ್ಪಮಟ್ಟದಲ್ಲಿಯಾದರು ಕೊಡುವುದಕ್ಕೆ ಅಲ್ಲಿ ನೀರು ಇರಬೇಕಾಗುತ್ತದೆ. ಆದ್ದರಿಂದ ತಾವು ನಮ್ಮ ವಿವೇಚನೆಯಿಂದ ಇದರ ಬಗ್ಗೆ ಯೋಚನೆ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಅಲ್ಲಿ ಕಟ್‌ಔಟ್ ಅನ್ನು ಕಿತ್ತು ಹಾಕುವುದಕ್ಕೆ ಹೋಗಬೇಡಿ. ಅಲ್ಲಿ ಹುಕ್ ಹಾಕಿ ಕರೆಂಟ್ ತೆಗೆದುಕೊಳ್ಳುವಂಥ ಅಭ್ಯಾಸ ಮೊದಲು ಇರಲಿಲ್ಲ. ಆದ್ದರಿಂದ ಇದನ್ನು ಅಭ್ಯಾಸ ಮಾಡುವಂಥ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡಬೇಡಿ.

ಡಾ॥ ವಿ.ಎಸ್. ಆಚಾರ್ಯ :– ಮಾನ್ಯ ಛೇರ್ಮನ್‌ರವರೆ, ಅಲ್ಲಿ ಬೇಗ ಮಳೆ ಬಂದರೆ, ನಾವು ಖಂಡಿತ ಅವರಿಗೆ ನೀರು ಒದಗಿಸುತ್ತೇವೆ. ಆದರೆ, ಒಂದು ವಿಷಯವನ್ನು ತಾವು ತಿಳಿದುಕೊಳ್ಳಬೇಕು. ನಾವು ಅಲ್ಲಿ ಡ್ಯಾಂ ಅನ್ನು ಕಟ್ಟದಿದ್ದರೆ, ಫೆಬ್ರವರಿ 12ರ ನಂತರ ಅಲ್ಲಿ ನೀರೇ ಇರುತ್ತಿರಲಿಲ್ಲ. ನಮ್ಮ ಜನರಿಗೆ ಕುಡಿಯುವ ನೀರೀಗೋಸ್ಕರ ಅಲ್ಲಿ ನೀರನ್ನು ಸ್ಟೋರ್ ಮಾಡಿದ್ದರಿಂದ ಅಲ್ಲಿ ನೀರಿದೆ. ಇದೂ ಕೂಡ ಬಹಳ ತೀವ್ರವಾಗಿ ಕೆಳಕ್ಕೆ ಇಳಿಯುತ್ತಿದೆ. ಆದ್ದರಿಂದ ಇಂಥ ಒಂದು ಸನ್ನಿವೇಶದಲ್ಲಿ ತಾವು ಅರ್ಥಮಾಡಿಕೊಂಡು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇ) ವಿಷಯ :– ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಕೊಕ್ಕಡ, ಪಟ್ರಮೆ ಮತ್ತು ನಿಡ್ಲೆ ಗ್ರಾಮಗಳಲ್ಲಿ ಗೊತ್ತಿಲ್ಲದೆ ಎಂಡೋಸಲ್ಫಾನ್ ಔಷಧಿಯನ್ನು ಸಿಂಪರಣೆ ಮಾಡಿರುವುದರಿಂದ ಭೀಕರ ಕಾಯಿಲೆಗೆ ತುತ್ತಾಗಿರುವ ಬಗ್ಗೆ :

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) :– ಮಾನ್ಯ ಛೇರ್ಮನ್‌ರವರೆ, ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಕೊಕ್ಕಡ, ಪಟ್ರಮೆ ಮತ್ತು ನಿಡ್ಲೆ ಗ್ರಾಮಗಳಲ್ಲಿ 1970 ರಿಂದ 2000ನೇ